3. "ಪ್ರಸ್ತುತ ಸಹಕಾರ ಕಾಯಿದೆ ಸಹಕಾರ ಚಳುವಳಿಗೆ ಪೂರೆತವಾಗಿದೆಯೇ" ಎನ್ನುವ ಚಿಂತನೆಯ ರಾಜ್ಯಮಟ್ಟದ ಕಾರ್ಯಕ್ರಮವನ್ನು ಗದಗ ಜಿಲ್ಲೆಯ ಕಣಗಿನಹಾಳ ಗ್ರಾಮದಲ್ಲಿ 2005ನೇ ಮೇ ಮಾಹೆಯಲ್ಲಿ ಏರ್ಪಡಿಸಲಾಗುವುದು.

ಸಮಕಾಲೀನ ಶ್ರೇಷ್ಠ ಸಹಕಾರಿಗಳ ಬಗ್ಗೆ 000 ಪುಸ್ತಕಗಳನ್ನು ಹಾಗೂ ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಕನಿಷ್ಟ 50 ಸಹಕಾರ ಸಂಘಗಳ ಬಗ್ಗೆ ಲೇಖನಗಳನ್ನು 2005ನೇ ಸಾಲಿನಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು. ಕಣಗಿನಹಾಳ ಗ್ರಾಮವನ್ನು ದತ್ತು ಪಡೆದು ಇದನ್ನು ಮಾದರಿ ಗ್ರಾಮವಾಗಿ ಅಭಿವೃದ್ಧಿಪಡಿಸಲು ತೀರ್ಮಾನಿಸಲಾಗಿದೆ. ಜೊತೆಗೆ ದಿವಂಗತ ಸಿದ್ದನಗೌಡ ಸಣ್ಣರಾಮನಗೌಡ ಪಾಟೀಲರು ಸಹಕಾರ ಕ್ಷೇತ್ರಕ್ಕೆ ಸಲ್ಲಿಸಿದ ಅನುಪಮ ಸೇವೆಗಾಗಿ ಇವರ ಪುತ್ಥಳಿಯನ್ನು ಅನಾವರಣಗೊಳಿಸಲಾಗುವುದು. ಶ್ರೇಷ್ಠ ಸಹಕಾರಿಗಳಾದ ದಿವಂಗತ ಕೆ.ಹೆಚ್. ಪಾಟೀಲ್‌ರವರ ಹೆಸರಿನಲ್ಲಿ ಧಾರವಾಡದಲ್ಲಿ ಒಂದು ಸಹಕಾರ ತರಬೇತಿ ಕಾಲೇಜನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ.

ಈ) ಹೌದು.

ಉ) ಸರಕಾರವು ರಾಜ್ಯದ ರೈತರಿಗೆ ಕೃಷಿ ಪತ್ತಿನ ಸಂಸ್ಥೆಗಳು ಶೇ. 6ರ ಬಡ್ಡಿ ದರದಲ್ಲಿ ಅಲ್ಪ ಕಾಲಾವಧಿ ಮಧ್ಯಮಾವಧಿ ಮತ್ತು ದೀರ್ಘಾವಧಿಸಾಲ ನೀಡುವ ಬಗ್ಗೆ ದಿನಾಂಕ 10–12–2004ರಂದು ಆದೇಶ ಹೊರಡಿಸಿದೆ. ಈ ಯೋಜನೆಯನ್ನು ಈಗಾಗಲೇ ಕಾರ್ಯಗತಗೊಳಿಸಲಾಗಿದೆ. ಈ ಯೋಜನೆಗೆ ಸರಕಾರವು 2004–05ನೇ ಸಾಲಿಗೆ ರೂ. 60.00 ಕೋಟಿ ಅವಕಾಶ ಮಾಡಿದ್ದ ಈಗಾಗಲೇ ರೂ. 15.00 ಕೋಟಿ ಮಂಜೂರು ಮಾಡಿರುತ್ತದೆ.

ಊ) ನಬಾರ್ಡ್ ಆರ್.ಬಿ.ಐ. ಸಂಸ್ಥೆಗಳು ಸಾಲ ನೀಡುವಿಕೆಯಲ್ಲಿ ಅನುಸರಿಸುವ ಮಾನದಂಡ ಹಾಗೂ ಮಾದರಿಯಂತೆ ಅವಶ್ಯಕ ಪ್ರಯತ್ನ ಮಾಡಲಾಗುವುದು.

585(1072) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಯಾವ ಯಾವ ತೋಟಗಾರಿಕೆ ಬೆಳೆಗಳನ್ನು ಗುರುತಿಸಿ, ಪ್ರೋತ್ಸಾಹಿಸಲಾಗಿದೆ;

ಆ) ತೋಟದ ಬೆಳೆಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡ ಕ್ರಮಗಳೇನು;

ಇ) ತೋಟಗಾರಿಕೆ ಬೆಳೆಗಳಿಗೆ ವಿಮೆ ಸೌಲಭ್ಯವನ್ನು ವಿಸ್ತರಿಸಲಾಗಿದೆಯೇ?

ಶ್ರೀ ಆರ್. ಶ್ರೀನಿವಾಸ್ (ತೋಟಗಾರಿಕೆ ಸಚಿವರು)

ಅ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಭೂ–ಹವಾಮಾನಕ್ಕನು ಗುಣವಾಗಿ ಬೆಳೆಯತಕ್ಕಂತಹ ಎಲ್ಲಾ ವಿವಿಧ ತೋಟಗಾರಿಕೆ ಬೆಳೆಗಳನ್ನು ಅಂದರೆ ಅಡಿಕೆ,

ತೆಂಗು, ಗೋಡಂಬಿ, ಕೋಕೋ ಇತ್ಯಾದಿ ತೋಟದ ಬೆಳೆಗಳನ್ನು ಹಾಗೂ ಕರಿಮೆಣಸು, ಏಲಕ್ಕಿ, ಶುಂಠಿ, ಅರಿಶಿನ, ಮೆಣಸಿನಕಾಯಿ, ಲವಂಗ, ಜಾಯಿಕಾಯಿ, ವೆನಿಲ್ಲಾ ಮುಂತಾದ ಸಾಂಬಾರು ಬೆಳೆಗಳನ್ನು ಮತ್ತು ವಾಣಿಜ್ಯ ಪುಷ್ಪ ಬೆಳೆಗಳು (ಉಡುಪಿ ಮಲ್ಲಿಗೆ), ಹಣ್ಣು, ತರಕಾರಿ, ಔಷಧಿಯ ಮತ್ತು ಸುಗಂಧಿತ ಬೆಳೆಗಳನ್ನು ಸಹ ಪ್ರೋತ್ಸಾಹಿಸಲಾಗುತ್ತಿದೆ.

ಆ) ತೋಟಗಾರಿಕೆ ಬೆಳೆಗಳ ಅಭಿವೃದ್ಧಿಗಾಗಿ ಹಮ್ಮಿಕೊಳ್ಳಲಾದ ಪ್ರಮುಖವಾದ ಕಾರ್ಯಕ್ರಮಗಳೆಂದರೆ;

1) ವಿವಿಧ ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತರಣೆ ಕಾರ್ಯಕ್ರಮ

2) ಉತ್ಕೃಷ್ಟ ಗುಣಮಟ್ಟದ ಸಸಿ/ಕಸಿಗಳ ಉತ್ಪಾದನೆ ಮತ್ತು ವಿತರಣೆ

3) ತರಬೇತಿ ಮತ್ತು ವಿಚಾರಸಂಕೀರಣಗಳ ಮೂಲಕ ಆಧುನಿಕ ತೋಟಗಾರಿಕೆ ಬೇಸಾಯದ ಬಗ್ಗೆ ತಾಂತ್ರಿಕ ಮಾಹಿತಿ ಒದಗಿಸುವುದು.

4) ನಬಾರ್ಡ್ ಮತ್ತು ರಾಷ್ಟ್ರೀಯ ತೋಟಗಾರಿಕೆ ಮಂಡಳಿಯಿಂದ ತೋಟಗಾರಿಕೆ ಬೆಳೆಗಳನ್ನು ಬೆಳೆಯಲು ಸಾಲ-ಸೌಲಭ್ಯ ಕಲ್ಪಿಸುವುದು.

5) ತೋಟಗಾರಿಕೆ ಬೆಳೆಗಳಿಗೆ ಹನಿ ನೀರಾವರಿ ಪದ್ಧತಿ ಅಳವಡಿಕೆಗೆ ಉತ್ತೇಜನ

6) ಕೃಷಿ ರಫ್ತು ವಲಯಗಳ ಸ್ಥಾಪನೆ

7) ತೋಟಗಾರಿಕೆ ಉತ್ಪನ್ನಗಳ ಕೊಯ್ಲೋತ್ತರ ನಿರ್ವಹಣೆ, ಸಂಸ್ಕರಣೆ, ಶೇಖರಣೆ ಬಗ್ಗೆ ಸಹ ಸೂಕ್ತ ತರಬೇತಿ ಏರ್ಪಡಿಸುವುದು ಮತ್ತು ಮಾಹಿತಿ ಒದಗಿಸುವುದು.

ಇ) ಹೌದು. ಆಲೂಗಡ್ಡೆ, ಈರುಳ್ಳಿ ಹಾಗೂ ಮೆಣಸಿನಕಾಯಿ ಬೆಳೆಗಳು ಬೆಳೆವಿಮೆ ಯೋಜನೆಯ ವ್ಯಾಪ್ತಿಗೆ ಒಳಪಟ್ಟಿದ್ದು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಿಗೆ ಯಾವುದೇ ತೋಟಗಾರಿಕೆ ಬೆಳೆಗಳ ವಿಮಾ ಸೌಲಭ್ಯವನ್ನು ವಿಸ್ತರಿಸಲಾಗಿರುವುದಿಲ್ಲ.

586(1073) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಅಂಗನವಾಡಿ ಕೇಂದ್ರಗಳಿಗೆ ಪ್ರಸ್ತುತ ಒದಗಿಸಿ ಕೊಡಲಾಗುತ್ತಿರುವ ಸೌಲಭ್ಯಗಳೇನು;

ಆ) ರಾಜ್ಯದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳು ಬಾಡಿಕೆ ಕಟ್ಟಡಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ;

ಇ) ಅಂಗನವಾಡಿ ಶಿಕ್ಷಕರಿಗೆ ಸೇವಾ ಭದ್ರತೆ ಮತ್ತಿತರ ಸವಲತ್ತುಗಳ ಕುರಿತು ಸರ್ಕಾರದ ಕ್ರಮಗಳೇನು?

ಶ್ರೀ ಭಾಗೀರಥಿ ಮರಳಸಿದ್ಧನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು)